

# ‘ಸಿನಿಮಾವನ್ನು ಟೀವಿ ಓವರ್‌ಟೇಕ್ ಮಾಡಿಲ್ಲ..’

■ ಸಂದರ್ಶನ: **ಬಿ.ಎಂ. ಹನೀಫ್**
ಚಿತ್ರ: ವಿಶ್ವನಾಥ ಸುವರ್ಣ

ರಮೇಶ್ ಅರವಿಂದ್ ‘ಥ್ರಿಲ್ಲಿಂಗ್ ಮೂಡ್’ನಲ್ಲಿದ್ದಾರೆ. ‘ಝೀ ಕನ್ನಡ’ ಟೀವಿಯಲ್ಲಿ ‘ವೀಕೆಂಡ್ ವಿದ್ ರಮೇಶ್’ ಕಾರ್ಯಕ್ರಮದ ಮೂರನೇ ಸೀಸನ್ ಯಶಸ್ಸಿನ ಗುಂಗು ಇನ್ನೂ ಇಳಿದಿಲ್ಲ. ರಮೇಶ್ ಹೋದಲ್ಲೆಲ್ಲ ಜನರು ಈಗ ‘ಸಾರ್.. ವೀಕೆಂಡ್ ವಿದ್ ... ಸೂಪರ್ ಸಾರ್..’ ಎನ್ನುತ್ತಿದ್ದಾರೆ. ಸುಮಾರು 21 ಅತಿಥಿಗಳು ಭಾಗವಹಿಸಿದ ಮೂರನೇ ಸೀಸನ್ ನಲ್ಲಿ ರಮೇಶ್ ವಿಭಿನ್ನ ಅನುಭವಗಳನ್ನು ಎದುರಿಸಿದ್ದಾರೆ. ಬಹುಭಾಷಾ ನಟ ಪ್ರಕಾಶ್ ರೈ ಅವರಿಂದ ಶುರುವಾಗಿ, ‘ಗೋಲ್ಡನ್‌ಸ್ಟಾರ್’ ಗಣೇಶ್ ವರೆಗೆ ಒಬ್ಬೊಬ್ಬರದೂ ಒಂದೊಂದು ವಿಭಿನ್ನ ಅನುಭವ. ಇದರ ನಡುವೆ ಬಂದು ಹೋದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಂದರ್ಶನಗಳಂತೂ ಕಾರ್ಯಕ್ರಮಕ್ಕೆ ದೊಡ್ಡ ಮಾರುಕಟ್ಟೆ ಮೌಲ್ಯವನ್ನು ತಂದುಕೊಟ್ಟಿದೆ.

30 ವರ್ಷಗಳ ತಮ್ಮ ವೃತ್ತಿಜೀವನದಲ್ಲಿ ರಮೇಶ್ ರಾಜಕೀಯದಿಂದ ತುಂಬ ದೂರವಿದ್ದವರು. ಈಗ ರಾಜಕಾರಣಿಗಳ ಸಖ್ಯ ಹೇಗೆ ಎನ್ನುವುದು ಪ್ರಶ್ನೆ! ನಂಜನಗೂಡು ಉಪಚುನಾವಣೆ ನಡೆಯುತ್ತಿದ್ದಾಗ ನಟ ಜಗ್ಗೇಶ್ ಷೋಗೆ ಬಂದರು. ಕಾಂಗ್ರೆಸ್ ಪಕ್ಷದವರು ಅದರ ಬಗ್ಗೆ ಚುನಾವಣಾ ಆಯೋಗಕ್ಕೆ ದೂರನ್ನೂ ನೀಡಿದರು. ಆ ಬಳಿಕ ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಬಂದರು. ಕಾಂಗ್ರೆಸ್‌ನವರು ಖುಷ್! ಇನ್ನೊಂದೆಡೆ ಜಾತ್ಯತೀತ ಜನತಾದಳದ ದೇವೇಗೌಡರೂ ಷೋನಲ್ಲಿ ಬಂದು ಕುಳಿತರು!

ಮಾತಿಗೆ ಕುಳಿತಾಗ ಮೊದಲ ಪ್ರಶ್ನೆ ಶುರುವಾಗಿದ್ದೇ ಅಲ್ಲಿಂದ. ‘ಇದೇನಿದು, ರಾಜಕೀಯದವರನ್ನು ಮೆರೆಸುತ್ತಿದ್ದೀರಾ..?’ ರಮೇಶ್ ಉತ್ಸಾಹದಿಂದ ಮಾತನಾಡುತ್ತಾ ಹೋದರು. ನಡುನಡುವೆ ನಗು. ಅದೂ ದೊಡ್ಡ ನಗು, ಸಣ್ಣ ನಗು ಮತ್ತು ಮುಗುಳ್ನಗು. ಕಳೆದ 30 ವರ್ಷಗಳಿಂದಲೂ ರಮೇಶ್ ಅರವಿಂದ್‌ರನ್ನು ನಗುಮುಖದಲ್ಲೇ ನೋಡಿದ್ದು. ರಮೇಶ್ ಇದ್ದರೆ ಮಾತಿಗೆ ಬ್ರೇಕ್ ಇಲ್ಲ; ಮತ್ತು ಬ್ರೇಕಿಂಗ್ ಮಾತು ಕೂಡಾ ಇಲ್ಲ. ಹಾಗೆಂದು ರಮೇಶ್ ಯಾವತ್ತೂ ಬೋರ್ ಹೊಡೆಸಿದವರೂ ಅಲ್ಲ. ಅವರ ಜತೆ ಮಾತನಾಡುತ್ತಿದ್ದರೆ ಸಮಯ ಹೋದದ್ದೂ ಗೊತ್ತಾಗುವುದಿಲ್ಲ. ಬೆಣ್ಣೆಯಿಂದ ಕೂದಲು ತೆಗೆದಂತೆ... ಅಲ್ಲಲ್ಲ, ಬೆಣ್ಣೆಯಲ್ಲಿ ಕೂದಲು ಇದ್ದದ್ದೇ ಗೊತ್ತಾಗುವುದಿಲ್ಲ!

ರಮೇಶ್ ಸದಾ ಚಟುವಟಿಕೆಯಿಂದ ಇರುವ ಮನುಷ್ಯ. ನಟನೆ, ನಿರ್ದೇಶನ, ಟೀವಿ ಷೋ, ಸಭಾ ಕಾರ್ಯಕ್ರಮ, ಆನ್‌ಲೈನ್ ವೀಡಿಯೊ, ಜಾಹೀರಾತು– ಹೀಗೆ ಎಲ್ಲ ಕಡೆಗಳಲ್ಲೂ ಸೃಜನಶೀಲ ಅಭಿವ್ಯಕ್ತಿ. ಈಗ ಟೀವಿ ಷೋ ಮುಗಿದಾಕ್ಷಣ ಹೊಸ ಸಿನಿಮಾದ ನಿರ್ದೇಶನ ಮತ್ತು ಎರಡು ಸಿನಿಮಾಗಳಲ್ಲಿ ನಟನೆಯ ಅವರ ಪ್ಲಾನ್ ಕೂಡಾ ಸಿದ್ಧವಾಗಿದೆ.

**ರಮೇಶ್:** ಈ ಸೀಸನ್‌ನಲ್ಲಿ ‘ವೀಕೆಂಡ್ ವಿದ್ ರಮೇಶ್’ ಹೊಸದೊಂದು ಮಜಲಿಗೆ ತಲುಪಿದೆ. ಸಾಮಾನ್ಯ ಜನರನ್ನು, ವೈವಿಧ್ಯಮಯ ಕ್ಷೇತ್ರಗಳ ಸಾಧಕ–ರನ್ನೂ ಆ ಸೀಟ್‌ನಲ್ಲಿ ಕೂರಿಸಬೇಕೆಂಬ ಕನಸಿತ್ತು, ಅದು ಈ ಸಲ ನನಸಾಗಿದೆ. ಅದರಲ್ಲೂ ಇಬ್ಬರು ಬಹುದೊಡ್ಡ ರಾಜಕಾರಣಿಗಳು ಬಂದು ಹೋದದ್ದು ಈ ಕಾರ್ಯಕ್ರಮದ ‘ರೀಚ್’ಅನ್ನು ತುಂಬ ದೂರಕ್ಕೆ ಒಯ್ದಿದೆ. ಒಬ್ಬರು ದೇಶದ ಮಾಜಿ ಪ್ರಧಾನಿ, ಇನ್ನೊಬ್ಬರು ರಾಜ್ಯದ ಹಾಲಿ ಮುಖ್ಯಮಂತ್ರಿ. ಎರಡೂ ಕಾರ್ಯಕ್ರಮಗಳು ನಾವು ಊಹಿಸಿದ್ದಕ್ಕಿಂತ ಭಿನ್ನವಾಗಿ, ಚೆನ್ನಾಗಿ ಬಂತು.

**★ ಇದುವರೆಗೆ ಸಾಂಸ್ಕೃತಿಕ ಲೋಕದ ಸಾಧಕರು ಮಾತ್ರ ಬರುತ್ತಿದ್ದರು. ರಾಜಕಾರಣಿಗಳನ್ನು ಹೀಗೆ ಆ ಸೀಟ್‌ನಲ್ಲಿ ಕೂರಿಸಿದ್ದು ಸರಿ ಅಂತೀರಾ?**

**ರಮೇಶ್:** ಸಾರ್, ನನಗೆ ರಾಜಕೀಯ ಅಂದ್ರೆ ಗೊತ್ತೇ ಇಲ್ಲ. ಯಾವ ರಾಜ–ಕಾರಣಿಗಳ ಪರಿಚಯವೂ ಇಲ್ಲ. ವೈಯಕ್ತಿಕವಾಗಿ ನನಗೂ, ಈ ಕಾರ್ಯಕ್ರಮ ಹೇಗಪ್ಪಾ ಮಾಡುವುದು ಅನ್ನುವ ಅಳುಕು ಇದ್ದೇ ಇತ್ತು. ನಮ್ಮ ರಿಸರ್ಚ್ ಟೀಮ್‌ನವರು ಸಾಕಷ್ಟು ಮಾಹಿತಿಗಳನ್ನು ಕಲೆ ಹಾಕಿದ್ದರು. ವಾಸ್ತವವಾಗಿ ಈ ಹಿಂದೆ ಎರಡು ಸೀಸನ್‌ಗಳಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಾರ್ಯಕ್ರಮಕ್ಕೆ ಬರಲು ಕೇಳಿಕೊಂಡಿದ್ದೆವು. ಅವರು ಒಪ್ಪಿರಲಿಲ್ಲ. ಈ ಸಲ ಅದು ಹೇಗೋ ಒಪ್ಪಿದರು. ಇಲ್ಲಿ ವೀಕೆಂಡ್.. ಕಾರ್ಯಕ್ರಮದ ವಿಶೇಷತೆಯ ಬಗ್ಗೆ ಹೇಳಲೇಬೇಕು. ನನಗೆ ಅವರ ಒಳಗಿನ ಪ್ರಪಂಚ ಹೇಗಿರುತ್ತದೆ ಎನ್ನುವ ಕುತೂಹಲ ಅಷ್ಟೆ. ಅವರ ಹೊರಗಿನ ಪ್ರಪಂಚದ ಬಗ್ಗೆ, ರಾಜಕಾರಣಿಯಾಗಿ ಸಾಧನೆಗಳ ಬಗ್ಗೆ ಎಲ್ಲರಿಗೂ ಗೊತ್ತೇ ಇರುತ್ತದೆ. ಸಿಎಂ ಆದ ಮೇಲೆ ಸಿದ್ದರಾಮಯ್ಯ ಏನೆಲ್ಲ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ ಎನ್ನುವುದನ್ನೆಲ್ಲ ಕೇಳುವುದು ನನ್ನ ಉದ್ದೇಶವೂ ಅಲ್ಲ. ನನ್ನದು ಒಬ್ಬ ಮನುಷ್ಯನಾಗಿ, as a